Raising the Level of Spillways of Certain Tanks in Dharwar District

48. Sri K. H. KURADAGI (Mundargi):—

Will the Minister for Public Work and Electricity be pleased to state :

(*a*) whether it has come to the notice of the Government if the spillways of the following tanks are raised the irrigational facilities will be provided to more acres of lands in the respective areas ;

(i) Janthali-Shirur tanks in Mundargi Taluk, Dharwar District.

(ii) Dambal Tank in Mundargi Taluk.

(*b*) if so, the action taken by the Government in this behalf ;

(*c*) the reason for not taking up the work for raising the spillway of Mushtikoppa tank even though the amount was provided in the Budget ?

Sri H. M. CHANNABASAPPA (Minister for Public Works and Electricity).—

(*a*) and (*b*) As the quantum of water flowing into this tank is not sufficient, no programme has been chalked out.

(*c*) As the water and land are not fit for cultivation, no steps have been taken.

ಶ್ರೀ ಕೆ. ಎಚ್. ಕುರಡಗಿ.—ನೀರು ಸಾಕಷ್ಟು ಪ್ರಮಾಣದಲ್ಲಿ ಇಲ್ಲದೆ ಇರುವುದರಿಂದ ಯಾವ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದಿರಿ, ನೀರು ಕೆರೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಂದು ಹೆಚ್ಚಾಗಿ ಹಳ್ಳಿಗಳಿಗೆ ಹೋಗುವುದಕ್ಕೆ ಹತ್ತಿದೆ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಹೆಚ್ಚಿಗೆ ನೀರು ಬಂತು ಎಂದು ತಾವು ಹೇಳಿದರೆ ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಕೆ. ಯಂಕಟಪ್ಪ.—ಮಾನ್ಯ ಸದಸ್ಯರು ಕೇಳಿದ್ದಕ್ಕೆ ತಾವು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಿದ್ದೀರಿ, ತಮ್ಮ ಇಲಾಖೆಯವರು ತಮಗೆ ಸರಿಯಾದ ಮಾಹಿತಿಗಳನ್ನು ಕೊಡದಿದ್ದರೆ, ಅದರ ಬಗ್ಗೆ ಈಗಾದರೂ ವಿಚಾರ ಮಾಡಲಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರು ಇಲ್ಲೆ ಇಲ್ಲ, ಎನ್ನತಕ್ಕದ್ದು ಅಂಕಿ ಅಂಶಗಳ ಆಧಾರದ ಮೇಲೆ ಲೆಕ್ಕಹಾಕಿ ಇದು ಆಗುವುದಿಲ್ಲ, ಅದು ಆಗುತ್ತದೆ ಎಂದು ಅವರು ಹೇಳುತ್ತಾರೆ. ಆಗುವುದಿಲ್ಲ ಎಂದು ಹೇಳಬೇಕಾದರೆ, ಈ ಪ್ರಮೇಯವು ಏನೂ ಇಲ್ಲ.

ಶ್ರೀ ಜೆ. ಎಲ್. ಕಬಾಡಿ.—ಕೆರೆಗೆ ಬರುವ ನೀರು ಉಪಯೋಗ ಇದೆಯೇ ? ಇಲ್ಲವೇ, ಎಂಬುದನ್ನು ರ್ಯಾಜೋರೆಟರಿಯಿಂದ ಚೆಸ್ಟ್ ಮಾಡ್ಸಿ ನೋಡಿದಾಗ ಆಗಿದೆಯೇ, ನೋಡಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ, ಈಗ ಏನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲಸವೇ ಮಾಡಿಲ್ಲ. ಕೆಲಸಮಾಡಬೇಕೆಂದು ಕೇಳಿದ್ದಾರೆ, ನೀರು ಉಪಯೋಗ ಬರಲಿಲ್ಲ ಎಂದು ಆ ಕೆಲಸ ತೆಗೆದುಕೊಂಡಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಹೇಳಿದ್ದಾರೆ ಕೆರೆಗೆ ಬರುವ ನೀರು ಸಾಕಷ್ಟು ಪ್ರಮಾಣದಲ್ಲಿ ಇಲ್ಲದೆ ಇರುವುದರಿಂದ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಕೆರೆ ಕಟ್ಟುವಾಗ ಟೆಕ್ನಿಕಲ್ ಫೀಸಿಬಿಲಿಟಿ ನೋಡಲಿಲ್ಲವೇ ? ನೀರು ಎಷ್ಟು ಬರುತ್ತದೆ ಏನ್ನುವುದನ್ನು ಪರೀಕ್ಷೆ ಮಾಡಲಿಲ್ಲವೇ ? ಸುಮ್ಮನೆ ಕೆರೆ ಕಟ್ಟಿ ನೀರು ಇಲ್ಲ ಎಂದು ಹೇಗೆ ಹೇಳುತ್ತೀರಿ ?

†Indicates that the remarks or speeches have not been revised by the member concerned.

ಶ್ರೀ ಎಚ್. ಎಂ. ಚನ್ನಬಸಪ್ಪ —ಮಾನ್ಯ ಸದಸ್ಯರು ವಿಷಯ ತಿಳಿಯದೆ ಮಾತನಾಡುತ್ತಿದ್ದಾರೆ. ಅಲ್ಲಿ ಕೆರೆ ಇದೆ, ನೀರು ಇದೆ, ಒಂದುಸಾವಿರ ಎಕರೆಗೆ ನೀರಾವರಿ ಮಾಡುತ್ತಿದ್ದಾರೆ ಡ್ಯಾಂಬರ್ ಟ್ಯಾಂಕ್ ಇದೆ. ಅಲ್ಲಿ 2ಸಾವಿರ ಎಕರೆಗೆ ನೀರು ಕೊಡುತ್ತಾ ಇದ್ದೇವೆ. ಅವರು ಕೇಳುವುದು ಇನ್ನಷ್ಟು ಬಡಾವಣೆ ಮಾಡಿ ಎಷ್ಟು ಹೆಚ್ಚಿಗೆ ಭೂಮಿಗೆ ನೀರು ಕೊಡಲಕ್ಕೆ ಸಾಧ್ಯವಾಗುತ್ತದೋ ಅಷ್ಟು ನೀರು ಎಂದು ಕೇಳಿತ್ತಿದ್ದಾರೆ ನಾವು ನೀರು ಕೊಡಿಲಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದೇವೆ. ನೀವು ಅದರ ಬಗ್ಗೆ ಪ್ರಶ್ನೆ ಹಾಕುತ್ತಿದ್ದೀರಿ.

Mr. DEPUTY SPEAKER.—Sri B. Sathyanarayana Singh may put Question. No 164.

Abolition of Check-Posts

164. Sri B. E. RAMAIAH (Siruguppa).—

Will the Minister for Finance be pleased to state:—

(*a*) the total number of check-posts which are functioning in Bellary District at present (give details) ;

(*b*) whether the Government is aware of the widespread opinion of the public that corruption is rampant among officers working in the check-posts ;

(*c*) in view of it, will Government take immediate steps to abolish the check-posts as recommended by the Boothalingam Committee ?

Sri M. Y. GHORADE (Minister for Finance).—

(*a*) Two ; one at Siruguppa and another at Hospet.

(*b*) No.

(*c*) Does not arise.

ಶ್ರೀ ಬಿ. ಸತ್ಯನಾರಾಯಣಸಿಂಗ್.—ತಾವು (ಬಿ) ಗೆ ಉತ್ತರವಾಗಿ ಗೊತ್ತಿಲ್ಲ ಎಂದು ಹೇಳುತ್ತೀರಿ, ಚೆಕ್ ಪೋಸ್ಟ್‌ಗಳಲ್ಲಿ ಲಂಚಗುಳಿತನ ತುಂಬಿದೆ. ಗೊತ್ತಿಲ್ಲ ಎಂದು ಹೇಳುತ್ತೀರಿ. ಅನೇಕಸಲ ಈ ವಿಷಯ ಚರ್ಚೆಗೆ ಬಂದಿದೆ. ಈಗಲಾದರೂ ಅಪಾದನೆ ಮಾಡುತ್ತಿದ್ದೇನೆ ಚೆಕ್ ಪೋಸ್ಟ್‌ನಲ್ಲ ಲಂಚಗುಳಿತನ ತುಂಬಿದೆ ಅದಕ್ಕೆ ಏನು ಹೇಳುತ್ತಿರಿ ?

†ಶ್ರೀ ಕೆ. ಎಚ್. ಪಾಟೀಲ್.—ಅಪಾದನೆ ಮಾಡುವುದು ಬೇರೆ. ನಿರ್ದಿಷ್ಟವಾಗಿ ಸರ್ಕಾರದ ಗಮನಕ್ಕೆ ತರುವುದು ಬೇರೆ. ನಿರ್ದಿಷ್ಟವಾಗಿ ಚಾರ್ಜ್ ಬರದಿಲ್ಲ. ಲಂಚದ ಅಪಾದನೆ ಸಾರ್ವತ್ರಿಕವಾಗಿ ಇದ್ದೇ ಇದೆ.

ಉಪಾಧ್ಯಕ್ಷರು.—ತಮ್ಮ ಕಡೆ ಸರಕಾರಣವಾಗಿ ಚಾರ್ಜ್‌ಸ್ ಇದ್ದರೆ ಕಳುಹಿಸಿಕೊಡಿ.

ಶ್ರೀ ಬಿ. ಸತ್ಯನಾರಾಯಣ ಸಿಂಗ್. - ಏನಾದರೂ ಹೇಳುತ್ತಾರೆ, ಚೆಕ್‌ಪೋಟ್‌ನಲ್ಲಿ ಕೆಲಸ ಮಾಡುವ ಅಧಿಕಾರಿಗಳು ದುಂದು ಜೀವನ ನಡೆಸುವುದನ್ನು ನೋಡಿದರೆ ಅವರು ಹೆಚ್ಚಿನ ಸಂಪತ್ತುಗಳಿಸಿರುವುದು ಗೊತ್ತಾಗುತ್ತದೆ. ಸಿ.ಐ.ಡಿ. ಮೂಲಕ ತನಿಖೆ ನಡೆಸಿ ಯೋಗ್ಯ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಷಯ ಇದಕ್ಕೆ ಸಿ.ಐ.ಡಿ. ಏತಕ್ಕೆ ಮಾನ್ಯ ಸದಸ್ಯರೇ ಬರೆದರೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ.